ಈ ಜಮೀನಿನಲ್ಲಿ 164 ಮಧ್ಯಮ ಆದಾಯ ವರ್ಗದ ಹಾಗೂ 22 ಹೆಚ್ಚಿನ ಆದಾಯ ವರ್ಗದ ಒಟ್ಟು 186 ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದ್ದು, ಈ ಯೋಜನೆಯ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ.442.00 ಲಕ್ಷ ಗಳಾಗಿರುತ್ತದೆ. ಈ ಯೋಜನೆಗೆ ಹಣಕಾಸಿನ ನೆರವನ್ನು ಹುಡ್ಕೋ ಸಂಸ್ಥೆಯಿಂದ ಪಡೆಯಲು ಯೋಜಿಸಲಾಗಿದೆ. ಈ ಕೆಲಸಕ್ಕೆ ಸದ್ಯದಲ್ಲೇ ಟೆಂಡರ್ ಕರೆದು 3 ತಿಂಗಳ ಒಳಗಾಗಿ ಕೆಲಸ ಪ್ರಾರಂಭಿಸಲಾಗುವುದು

ii) ಕೆಲಸ ಪ್ರಾರಂಬಿಸಿದ 18 ತಿಂಗಳ ಒಳಗಾಗಿ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು:- ಎ.ಬಿ.ಪಾಟೀಲರೆ, ಈ ಉತ್ತರದಿಂದ ನೀವು ತೃಪ್ತರಾಗಿದ್ದೀರಾ? ಇದಕ್ಕೆ ಉಪ ಪ್ರಶ್ನೆ ಇಲ್ಲವಾ?

ಶ್ರೀ ಎ.ಬಿ.ಪಾಟೀಲ್: ಉಪ ಪ್ರಶ್ನೆ ಇಲ್ಲಾ.

ಅಧ್ಯಕ್ಷರು:- ಶ್ರೀ ರಾಮರೆಡ್ಡಿಯವರೇ, ಸರ್ಕಾರದವರು ನಿಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಇದಕ್ಕೆ ಸಮಯದ ಅವಶ್ಯಕತೆ ಇಲ್ಲ.

ಅಧ್ಯಕ್ಷರು:- ಆದರೆ ಸರ್ಕಾರದವರು ಸ್ವಲ್ಪ ಸಮಯ ಕೇಳಿದ್ದಾರೆ ಮುಂದಿನ ಸಲ ಅದು ಇದ್ದಾಗ ನಾನು ಹಾಕಿಸಿಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೆ, ಒಂದು ಕೆಲಸ ಮಾಡಿ, ಸರ್ಕಾರದವರು ಹೇಗಿದ್ದರೂ ಸಮಯ ಕೇಳಿದ್ದಾರೆ, ಸಮಯ ಕೊಡಿ, ಅದನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿಕೊಳ್ಳಿ, ಅಥವಾ ಶಾರ್ಟ್ ನೋಟೀಸ್‌ಗೆ ಆದರೂ ಕನ್ವರ್ಟ್ ಮಾಡಿ. ಏಕೆಂದರೆ ಅದು ಅನ್‌ಸ್ಟಾರ್ಡ್ ಆಗಿದೆ.

ಅಧ್ಯಕ್ಷರು: ನೋಡೋಣ, I will look into it. ತಾವು ಇಬ್ಬರೂ ಪುನಃ ನನ್ನ ಛೇಂಬರ್ಸ್‌ಗೆ ಬನ್ನಿ, ಆ ವಿಷಯದ ಬಗ್ಗೆ ಮಾತನಾಡೋಣ We will decide as to how we should take it up.

ವಿಷಯ: ಅರಕಲಗೂಡು ತಾಲ್ಲೂಕಿನಲ್ಲಿ ಜನತಾ ಮನೆಗಳ ನಿರ್ಮಾಣದಲ್ಲಿ ಹಣ ದುರುಪಯೋಗ.

508 (3297)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು): ಮಾನ್ಯ ವಸತಿ ಸಚಿವರು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ತಾಲ್ಲೂಕಿನಲ್ಲಿ ಜನತಾ ಮನೆಗಳ ನಿರ್ಮಾಣದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಎಷ್ಟು ಮನೆಗಳ (ವಿವಿಧ ಯೋಜನೆಯ) ಹಣದ ದುರುಪಯೋಗದಿಂದ ಅಪೂರ್ಣಗೊಂಡಿರುತ್ತವೆ; ಹಾಗೂ ಅವ್ಯವಹಾರಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಪೂರ್ಣಗೊಂಡಿರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಬಂದಿದೆ.

ಆ) ಹಣ ದುರುಪಯೋಗದಿಂದ ವಿವಿಧ ಯೋಜನೆಗಳಲ್ಲಿ ಅಪೂರ್ಣಗೊಂಡ ಮನೆಗಳು ಕೆಳಕಂಡಂತೆ ಇರುತ್ತವೆ.

1)	ಆಶ್ರಯ ಯೋಜನೆ	11 ಮನೆಗಳು
2)	ಅಂಬೇಡ್ಕರ್ ಯೋಜನೆ	5 ಮನೆಗಳು
3)	ಇಂದಿರಾ ಆವಾಜ್ ಯೋಜನೆ	14 ಮನೆಗಳು
	ಒಟ್ಟು	**30 ಮನೆಗಳು**

ಈ ಯೋಜನೆಯ ಹಣ ದುರುಪಯೋಗಕ್ಕೆ ಸಂಬಂಧಿಸದಂತೆ ಕಿರಿಯ ಅಭಿಯಂತರರಾದ ಶ್ರೀ ಶಾಂತಪ್ಪ ಮತ್ತು ದ್ವಿತೀಯ ದರ್ಜೆ ಸಹಾಯಕರಾದ ಕೆ.ಎನ್.ಕಲ್ಲೇಶ ಮೂರ್ತಿ ಇವರನ್ನು ಹಾಗೂ ಇತರ ಕಾಮಗಾರಿಗಳಿಗೆ ಸಂಬಂಧಿಸದಂತೆ ಕಿರಿಯ ಅಭಿಯಂತರರುಗಳಾದ ಶ್ರೀ ವೇಣುಗೋಪಾಲ್, ಶ್ರೀ ಶಿವಣ್ಣ ಮತ್ತು ಪ್ರಥಮ ದರ್ಜೆ ಸಹಾಯಕರಾದ ಶ್ರೀ ಮಲ್ಲೇಗೌಡ ಇವರುಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಸಂಬಂಧಿಸಿದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಾದ ಶ್ರೀ ಗುರುರಾಜ್ ಮತ್ತು ಮೇಲ್ಕಂಡ ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ಸರ್ಕಾರ ಕ್ರಮ ಕೈಗೊಂಡಿದೆ.

ಇ) ಎಂಟು ಮನೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಪೂರ್ಣಗೊಂಡಿರುವ

ಮನೆಗಳನ್ನು ಫಲಾನುಭವಿಗಳು ನಂತರ ಕಟ್ಟಡಗಳನ್ನು ಮುಂದುವರೆಸಿದ್ದು, ಶೌಚಾಲಯ ನಿರ್ಮಾಣ, ಪ್ಲಾಸ್ಟರಿಂಗ್ ಕೆಲಸ ಬಾಕಿ ಇದ್ದು ಮನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎ.ಟಿ.ರಾಮಸ್ವಾಮಿ:- ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯ ವಿವಿಧ ಯೋಜನೆಗಳ ಅಡಿಯಲ್ಲಿ ಸುಮಾರು 30 ಪ್ರಕರಣಗಳಲ್ಲಿ ಹಣ ದುರುಪಯೋಗವಾಗಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ನಾನು ಸುಮಾರು 6 ತಿಂಗಳ ಹಿಂದೆ ಇದೇ ಪ್ರಶ್ನೆಯನ್ನು ಕೇಳಿದ್ದೆ, ನನ್ನ ಗಮನಕ್ಕೆ ಬಂದಿರುವ ಹಾಗೆ ಅಲ್ಲಿ 300 ಕ್ಕೂ ಹೆಚ್ಚು ವಿವಿಧ ಯೋಜನೆಯ ಆಶ್ರಯ ಮನೆಗಳಲ್ಲಿ ಹಣ ದುರುಪಯೋಗ ಆಗಿದೆ. ಅಧಿಕಾರಿಗಳು, ಫಲಾನುಭವಿಗಳಿಗೆ ಹಣವನ್ನು ಕೊಟ್ಟಿಲ್ಲ, ಆ ಹಣವನ್ನು ಅವರೇ ಡ್ರಾ ಮಾಡಿಕೊಂಡು ದುರುಪಯೋಗ ಮಾಡಿಕೊಂಡಿರುವುದರಿಂದ ಈಗ ಆ ಮನೆಗಳೆಲ್ಲಾ ಅಪೂರ್ಣವಾಗಿದೆ, ಈಗ 30 ಪ್ರಕರಣಗಳಲ್ಲಿ ಹಣ ದುರುಪಯೋಗ ಆಗಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಆದರೆ ನನಗೆ ತಿಳಿದಿರುವ ಹಾಗೆ ಅವರು ಕೊಟ್ಟಿರುವ ಮಾಹಿತಿ ತಪ್ಪು ಎಂದು ನಾನು ಹೇಳುತ್ತೇನೆ. ಎಷ್ಟು ಮನೆಗಳ ಹಣ ದುರುಪಯೋಗ ಆಗಿದೆ, ಅದರ ಮಾಹಿತಿಗಳನ್ನು ಕೊಡಬೇಕು ಎಂದು ನಾನು ಈಗಾಗಲೇ ಅವರ ಜೊತೆ ಜಿಲ್ಲಾ ಪ್ರಗತಿಪರಿಶೀಲನಾ ಸಭೆಯಲ್ಲಿ ಚರ್ಚೆ ಮಾಡಿ ಹೇಳಿದ್ದೇನೆ. ಅಧಿಕಾರಿಗಳು ಹಣ ಡ್ರಾ ಮಾಡಿಕೊಂಡು ದುರುಪಯೋಗ ಮಾಡಿಕೊಂಡಿರುವುದರಿಂದ ಆ ಮನೆಗಳು ಒಂದೆರೆಡು ವರ್ಷದಿಂದ ಅಪೂರ್ಣಗೊಂಡಿದೆ, ಅವು ಅಪೂರ್ಣಗೊಂಡಿರುವುದರಿಂದ ಅದು ಮಳೆಯಲ್ಲಿ ನೆಂದು, ಬಿದ್ದುಹೋಗುವಂತಹ ಪರಿಸ್ಥಿತಿ ಬಂದಿದೆ, ಆದಕಾರಣ ಅದನ್ನು ಸಂಪೂರ್ಣಗೊಳಿಸಲು ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ? ಏಕೆಂದರೆ, ಅವರ ತಪ್ಪಿನಿಂದ ಅದು ನಿಂತು ಹೋಗಿಲ್ಲ, ಅಧಿಕಾರಿಗಳು ಹೆಚ್ಚು ಹಣ ಡ್ರಾ ಮಾಡಿಕೊಂಡು ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡಿಲ್ಲ, ಆದಕಾರಣ ಮನೆಗಳು ಅಪೂರ್ಣಗೊಂಡಿವೆ, ಅವುಗಳನ್ನು ಪೂರ್ಣಗೊಳಿಸುವುದಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ? ಏಕೆಂದರೆ, ಹಾಸನ ಜಿಲ್ಲೆ ವಸತಿ ಸಚಿವರ ಜಿಲ್ಲೆ, ನೀವೇ ಉಸ್ತುವಾರಿಸಚಿವರು, ಈ ವಸತಿ ಯೋಜನೆ ಹೆಚ್ಚು ಪರಿಣಾಮಕಾರಿಯಾಗಿ ವ್ಯವಸ್ಥಿತವಾಗಿ, ಪ್ರಾಮಾಣಿಕವಾಗಿ ಅಲ್ಲಿ ಆಗಬೇಕಾಗಿತ್ತು. ಆದರೆ ಅಲ್ಲಿಯೇ ಹಣ ದುರುಪಯೋಗ ಆಗುತ್ತಿದೆ ಎಂದರೆ ನಾವು ಏನು ಹೇಳಬೇಕು ಹೇಳಿ? ಬೇರೆ ವಿಷಯದಲ್ಲಿ ಭಯ ಭೀತಿ ಇದೆ ಆದರೆ, ಹಣ ದುರುಪಯೋಗ ಮಾಡಿರುವುದಕ್ಕೆ ನಮ್ಮ ಹಾಸನ ಜಿಲ್ಲೆಯಲ್ಲಿ ಭಯಭೀತಿ ಇಲ್ಲವಲ್ಲ.

ಅಧ್ಯಕ್ಷರು:- ಅವರಿಗೆ ಏತಕ್ಕೆ ಭಯಭೀತಿ ಇಲ್ಲ?

ಶ್ರೀ ಎ.ಟಿ.ರಾಮಸ್ವಾಮಿ:- ಓಟು ಇಂಥವರಿಗೇ ಹಾಕಬೇಕು ಎಂದು ಭಯಭೀತಿ ಇದೆ, ದುಡ್ಡು ಹೊಡೆಯುವುದಕ್ಕೆ ಹಾಸನ ಜಿಲ್ಲೆಯಲ್ಲಿ ಭಯಭೀತಿ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ:- ಸನ್ಮಾನ್ಯ ಸಭಾಧ್ಯಕ್ಷರೆ, ವಿಷಯ ಯಾವುದಕ್ಕೆ ಸಂಬಂಧಪಟ್ಟಿದೆ, ಆ ವಿಷಯದ ಬಗ್ಗೆ ಮಾತನಾಡಬೇಕೇ ವಿನಃ ಬೇರೆ ವಿಷಯದ ಬಗ್ಗೆ ಚರ್ಚೆ ಮಾಡಿದರೆ ಅಷ್ಟಾಗಿ ಸರಿಕಾಣಿಸುವುದಿಲ್ಲ. ನಾನು ಆ ದಿವಸವೇ ಹೇಳಿದ್ದೇನೆ, ನಮ್ಮ ಇಲಾಖೆ ಬಗ್ಗೆ ಪ್ರಶ್ನೆ ಕೇಳಿದರೆ ನಾನು ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ಮಾನ್ಯ ಸದಸ್ಯರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೇಳಿದ್ದರು, ಮತ್ತು ನನಗೆ ಒಂದು ಪತ್ರವನ್ನೂ ಸಹ ಬರೆದಿದ್ದರು. ಅವರು ಬರೆದಂತಹ ಪತ್ರವನ್ನು 5 ನಿಮಿಷ ಕೂಡ ಇಟ್ಟುಕೊಳ್ಳದೆ, ನಾನು ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ. ನನಗೆ ಮಾಹಿತಿ ಬಂದಿರುವ ಪ್ರಕಾರ ಆಶ್ರಯ ಮನೆಯಲ್ಲಿ ಸುಮಾರು 9 ಮನೆಗಳು, ಆಶ್ರಯ ಮನೆಯಲ್ಲಿ 11 ಮನೆಗಳು, ಚಿಕ್ಕನಹಳ್ಳಿ ಗ್ರಾಮದಲ್ಲಿ 4 ಮನೆಗಳು, ಅಗ್ರಹಾರ ಗ್ರಾಮದಲ್ಲಿ 5 ಮನೆಗಳು, ಹೆಬ್ಬಾಲಕೊಪ್ಪಲ ಗ್ರಾಮದಲ್ಲಿ 2 ಮನೆಗಳು ಎಂದು ಮಾಹಿತಿ ಕೊಟ್ಟಿದ್ದಾರೆ. ಅದರಲ್ಲೂ ಸಂಬಂಧಪಟ್ಟ ಅಧಿಕಾರಿಗಳು ಆಶ್ರಯ ಮನೆ ವ್ಯಾಪ್ತಿಯಲ್ಲಿ, ಇಂದಿರಾ ಆವಾಸ್‌ನಲ್ಲಿ ಎಬಿಎಂ ಹಳ್ಳಿಯಲ್ಲಿ 5 ಮನೆಗಳು ಅಪೂರ್ಣಗೊಂಡಿರುವುದು, ಅಂಬೇಡ್ಕರ್ ಯೋಜನೆಯಲ್ಲಿ 5 ಮನೆಗಳು ಅಪೂರ್ಣಗೊಂಡಿರುವುದು, ಮತ್ತು ಇಂದಿರಾ ಆವಾಸ್ ಯೋಜನೆಯಲ್ಲಿ 9 ಮನೆಗಳು, 14 ಮನೆಗಳಲ್ಲಿ, 9ಮನೆ ದೊಡ್ಡಮಗೆ, ಎಲಗತ್ತನಹಳ್ಳಿಯಲ್ಲಿ 5 ಮನೆ ಒಟ್ಟು 14 ಮನೆಗಳು. ಈ ವಿಷಯವನ್ನು ಸಂಬಂಧಪಟ್ಟಂತಹ ಶಾಸಕರು ಪ್ರಗತಿಪರಿಶೀಲನಾ ಸಭೆಯಲ್ಲಿ ತಿಳಿಸಿದರು ಮತ್ತು ಪತ್ರವನ್ನೂ ಸಹ ಬರೆದರು. ನನಗೆ ಬೇರೆ ಕಡೆಯಿಂದ ಮಾಹಿತಿ ಕೂಡ ಬಂದಿದೆ. ಹಾಗೆ ಮಾಹಿತಿ ಬಂದ ತಕ್ಷಣ ನಾನು ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತಹ ಇಲಾಖಾ ಅಧಿಕಾರಿಗಳಿಂದ ವಿಚಾರಣೆ ಮಾಡಿಸಿದ್ದೇವೆ, ಮತ್ತು ಈಗಾಗಲೇ ಅಂತಹ ಅಧಿಕಾರಿಗಳ ಮೇಲೆ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಸಹ ಮಾಡಿದ್ದೇವೆ.

11.10 ಎ.ಎಂ

ಶಾಂತಪ್ಪ, ಕಲ್ಲೇಶಮೂರ್ತಿ, ವೇಣುಗೋಪಾಲ್, ಶಿವಣ್ಣ ಮತ್ತು ಗುರುರಾಜರಾವ್, ಬಿ.ಡಿ.ಓ. ಇವರುಗಳ ಮೇಲೆ ಈಗಾಗಲೇ ಎನ್‌ಕ್ವೈರಿ ಆರ್‌ಡಿಪಿಆರ್ ಇಲಾಖೆ ವ್ಯಾಪ್ತಿಯಲ್ಲಿ ನಡೆಯುತ್ತಿದೆ. ಎಷ್ಟೆಷ್ಟು ಹಣ ದುರುಪಯೋಗವಾಗಿದೆಯೆಂದು ಇಲಾಖೆಯಿಂದ ವರದಿ ಬಂದ ತಕ್ಷಣ ಯಾರ ಮೇಲೂ ದಾಕ್ಷಿಣ್ಯವಿಲ್ಲದೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕಿಂತ ಹೆಚ್ಚು ಮಾಹಿತಿ ಬೇಕಿದ್ದರೆ ಒದಗಿಸಿಕೊಡಲು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ:- ನಾನು ವಸತಿ ಯೋಜನೆಯಲ್ಲಿ ದುರುಪಯೋಗವಾಗಿರುವುದನ್ನು ಹೇಳುತ್ತಿದ್ದೇನೆಯೇ ವಿನಃ ಬೇರೆ ಇಲಾಖೆ ಬಗ್ಗೆ ನಾನು

ಮಾತನಾಡಲು ಹೋಗುತ್ತಿಲ್ಲ. ಇದನ್ನು ಒಂದು ವರ್ಷದಿಂದ ನಾನು ಪ್ರಸ್ತಾಪಿಸುತ್ತಿದ್ದು, ಕಾಗದವನ್ನು ಒಂದು ವರ್ಷದ ಹಿಂದೆಯೇ ಬರೆದಿದ್ದೇನೆ, ಸದನದಲ್ಲಿ ಆರು ತಿಂಗಳ ಹಿಂದೆ ಸಹ ಚರ್ಚಿಸಿದ್ದೇನೆ ಅಲ್ಲದೆ, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲೂ ಚರ್ಚಿಸಿದ್ದೇನೆ. ಎಷ್ಟು ಹಣ ದುರುಪಯೋಗವಾಗಿದೆಯೆಂಬುದನ್ನು ಹೇಳಲು ಒಂದು ವರ್ಷ ಬೇಕೆ? ಇದರಲ್ಲಿ ಯಾರಿಗಾದರೂ ಮುಲಾಜು ಇದೆಯೇ? ನನಗೆ ಗೊತ್ತಿರುವಂತೆ ಮುನ್ನೂರಕ್ಕೂ ಹೆಚ್ಚು ಮನೆಗಳ ವಿಚಾರದಲ್ಲಿ ಅಧಿಕಾರಿಗಳು ಹಣವನ್ನು ಡ್ರಾ ಮಾಡಿಕೊಂಡಿದ್ದು, ಹಣವನ್ನು ಫಲಾನುಭವಿಗಳಿಗೆ ಕೊಟ್ಟಿಲ್ಲ. ಇಪ್ಪತ್ತು ಸಾವಿರ ರೂಪಾಯಿಗಳನ್ನು ಡ್ರಾ ಮಾಡಿಕೊಂಡು ನಾಲ್ಕುಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಈಗ ಮನೆಗಳನ್ನು ಪೂರ್ಣಗೊಳಿಸುವುದು ಹೇಗೆ? ಬಡವರ ಮನೆಗಳೆಲ್ಲವೂ ಬಿದ್ದು ಹೋಗುತ್ತಿದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ವಸತಿ ಸಚಿವರೇ ಆ ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದು, ಆ ಜಿಲ್ಲೆಯಲ್ಲೇ ವಸತಿ ಯೋಜನೆ ಸಮರ್ಪಕವಾಗಿ, ಪ್ರಾಮಾಣಿಕವಾಗಿ ಅನುಷ್ಠಾನವಾಗಿಲ್ಲವೆಂದರೆ ನಾನು ಏನು ಹೇಳಬೇಕೆಂಬುದನ್ನು ತಾವೇ ಹೇಳಿ.

ಅಧ್ಯಕ್ಷರು: ಮುನ್ನೂರು ಮನೆಗಳ ವಿಚಾರದಲ್ಲಿ ಈ ರೀತಿಯಾಗಿದೆಯೆಂದು ಸದಸ್ಯರು ಹೇಳುತ್ತಿದ್ದಾರೆ, ತಾವು ಇನ್ಸ್‌ಪೆಕ್ಷನ್ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ನಾನು ವಸತಿ ಖಾತೆಯನ್ನು ವಹಿಸಿಕೊಳ್ಳುವುದಕ್ಕಿಂತ ಮುಂಚೆಯೇ ಈ ಅವ್ಯವಹಾರ ನಡೆದಿದ್ದು ಕ್ರಮ ತೆಗೆದುಕೊಂಡಿದ್ದೇವೆ. ನಾನು ವಸತಿ ಮಂತ್ರಿಯಾದ ನಂತರ ಇದು ಆಗಿದ್ದಲ್ಲ. ಹಿಂದೆ ಯಾರು ಅವ್ಯವಹಾರ ಮಾಡಿದ್ದರೋ, ನಾವು ಅವರುಗಳ ಮೇಲೆ ಕ್ರಮ ತೆಗೆದುಕೊಂಡು ಐದು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಇದರಲ್ಲಿ ನಾನು ಮುಚ್ಚುಮರೆ ಮಾಡುವ ಹಾಗಿದ್ದರೆ ಐದು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವ ಅವಶ್ಯಕತೆಯೇನಿತ್ತು? ಅವರುಗಳನ್ನು ಸಸ್ಪೆಂಡ್ ಮಾಡಿ ಎನ್‌ಕ್ವೈರಿ ನಡೆಯುತ್ತಿದ್ದು, ಸಂಬಂಧಪಟ್ಟ ಮ್ಯಾನೇಜರ್ ಯಾರಿದ್ದರು, ಅವರನ್ನು ವರ್ಗ ಮಾಡಿದ್ದೇವೆ. ನಾವು ಅವರ ಪರವಾಗಿ ವಹಿಸಿಕೊಳ್ಳಬೇಕಾಗಿದ್ದರೆ ಫೈಲ್ ಅನ್ನು ಮುಚ್ಚಿಹಾಕಬಹುದಾಗಿತ್ತು. ನಾವೇನು ಮುಚ್ಚಿ ಹಾಕಿದ್ದೇವೆಯೇ? ನನಗೆ ಬಂದಿರುವ ಮಾಹಿತಿ ಪ್ರಕಾರ ಮೂವತ್ತು ಮನೆಗಳೆಂದು ಇದೆಯೇ ವಿನಾ ಮುನ್ನೂರು ಮನೆಗಳೆಂದು ಇಲ್ಲ. ತಾವು ಯಾವ ತರಹದ ಎನ್‌ಕ್ವೈರಿ ಮಾಡಿಸಬೇಕೆಂದು ಬಯಸುತ್ತೀರೋ ಆ ರೀತಿ ಮಾಡಿಸುತ್ತೇವೆ. ಇದರಲ್ಲಿ ಹಿಂದು-ಮುಂದು ನೋಡುವಂಥ ಅವಶ್ಯಕತೆಯಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ಮುನ್ನೂರಕ್ಕೂ ಹೆಚ್ಚು ಮನೆಗಳ ಸಂಬಂಧದಲ್ಲಿ ಈ ತರಹದ ಅವ್ಯವಹಾರವಾಗಿದೆ. ಈಗ ಮನೆಗಳನ್ನು ಪೂರ್ಣಗೊಳಿಸಬೇಕಾಗಿದೆ, ತಪ್ಪು ಫಲಾನುಭವಿಗಳದ್ದಲ್ಲ.

ಅಧ್ಯಕ್ಷರು: ಮಂತ್ರಿಗಳ ಉದ್ದೇಶ ತಮಗೆ ಗೊತ್ತಾಯಿತಲ್ಲ. ಅವರು ಏನು

ಹೇಳುತ್ತಿದ್ದಾರೆಂದರೆ, ನಮಗೆ ಲಭ್ಯವಿರುವ ಅಂಕಿ-ಅಂಶಗಳ ಪ್ರಕಾರ ಮೂವತ್ತು ಮನೆಗಳ ಸಂಬಂಧದಲ್ಲಿ ಖಚಿತವಾಗಿ ದುರುಪಯೋಗವಾಗಿರುವುದು ತಿಳಿದು ಬಂದಿದ್ದು, ಸಂಬಂಧಪಟ್ಟ ಅಧಿಕಾರಗಳ ಮೇಲೆ ಕ್ರಮ ಜರುಗಿಸಿದ್ದು, ಉಳಿದಂತೆ ವಿಚಾರಣೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವತಿಯಿಂದ ನಡೆಯುತ್ತಿದೆ. ಸನ್ಮಾನ್ಯ ಸದಸ್ಯರು ಇನ್ನೂ ಹೆಚ್ಚು ಮನೆಗಳ ವಿಚಾರದಲ್ಲಿ ಆ ರೀತಿಯ ದುರುಪಯೋಗವಾಗಿದೆಯೆಂದು ಹೇಳುತ್ತಿದ್ದು ಆ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಇದ್ದು ಬರೆದು ಕೊಟ್ಟರೆ ತಕ್ಷಣ ಸಂಬಂಧಿಸಿದವರ ಮೇಲೆ ಕ್ರಮ ಕೈಗೊಳ್ಳುತ್ತೇನೆ, ಇಲ್ಲಿ ಯಾರನ್ನೂ ರಕ್ಷಿಸುವ ಉದ್ದೇಶ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಬರೆದು ಕೊಟ್ಟಿದ್ದೇನೆ, ಆದರೆ, ಎಷ್ಟು ಹಣ ದುರುಪಯೋಗವಾಗಿದೆಯೆಂದು ಹೇಳಬೇಕಲ್ಲ? ಇದನ್ನು ತನಿಖೆ ಮಾಡುವುದಕ್ಕೆ ಒಂದು ವರ್ಷ ಬೇಕೆ? ಅಪೂರ್ಣಗೊಂಡಿರುವ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಹಣವನ್ನು ಫಲಾನುಭವಿಗಳಿಗೆ ನೇರವಾಗಿ ಕೊಟ್ಟಿದ್ದಾರೆಯೇ? ಇಲ್ಲವೇ ಗುತ್ತಿಗೆದಾರರಿಗೆ ಕೊಟ್ಟಿದ್ದಾರೆಯೇ? ಇದು ನಮಗೆ ಗೊತ್ತಾಗಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಮೊದಲೇ ಹೇಳಿದೆ: ಹಣವನ್ನು ಅಧಿಕಾರಿಗಳು ಡ್ರಾ ಮಾಡಿಕೊಂಡರು, ಆದನ್ನು ಫಲಾನುಭವಿಗಳಿಗೆ ಕೊಡಲಿಲ್ಲ. ಈ ಕೆಲಸವನ್ನು ಈ ವರ್ಷ, ಹಿಂದಿನ ವರ್ಷ, ಅದರ ಹಿಂದಿನ ವರ್ಷ ಮಾಡಿದ್ದಾರೆ. ಅದಕ್ಕೋಸ್ಕರ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿಟ್ಟಿರುವುದು. ಅಲ್ಲಿ ಹಣ ಖರ್ಚಾಗಿದ್ದು, ಮನೆಗಳು ಅರ್ಧಂಬರ್ಧ ಕಟ್ಟಿದ್ದು ಪೂರ್ಣಗೊಳಿಸುವುದಕ್ಕೆ ಫಲಾನುಭವಿಗಳ ಖಾತೆಯಲ್ಲಿ ಹಣವಿಲ್ಲ. ಮನೆಗಳನ್ನು ಪೂರ್ಣಗೊಳಿಸುವುದಕ್ಕಾದರೂ ಕ್ರಮ ತೆಗೆದುಕೊಳ್ಳಬೇಕಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನನಗೆ ಮಾನ್ಯ ಸದಸ್ಯರಾದ ರಾಮಸ್ವಾಮಿಯವರು ಒಂದು ಕಾಗದ ಕೊಟ್ಟಿದ್ದು, ಅದರಲ್ಲಿ ಅಂತಹವರು ದುಡ್ಡು ಹೊಡೆದಿದ್ದಾರೆಂದು ತಿಳಿಸಿಲ್ಲ. ಅರಕಲಗೂಡು ತಾಲ್ಲೂಕಿನಲ್ಲಿ ಆಶ್ರಯ ಮನೆಗಳ ವಿಚಾರದಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ಪತ್ರ ಕೊಟ್ಟಾಗ ನಾನು ತಕ್ಷಣವೇ ಮುಖ್ಯ ಕಾರ್ಯದರ್ಶಿಯವರಿಗೆ ಕಾಗದ ಬರೆದು ಯಾರು ತಪ್ಪು ಮಾಡಿದ್ದಾರೋ ಅವರ ಮೇಲೆ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಬೇಕೆಂದು ಬರೆದಿದ್ದೇನಲ್ಲದೆ ಪತ್ರದ ಪ್ರತಿಯನ್ನೂ ಕೂಡ ಅವರಿಗೆ ಕಳುಹಿಸಿಕೊಟ್ಟಿದ್ದೇನೆ. ಮುಖ್ಯ ಕಾರ್ಯದರ್ಶಿಗಳು ಸಂಬಂಧಪಟ್ಟ ಜ್ಯೂನಿಯರ್ ಇಂಜಿನಿಯರ್ ಅವರನ್ನು ಸಸ್ಪೆಂಡ್ ಮಾಡಿದ್ದಾರಲ್ಲದೆ, ಕ್ರಿಮಿನಲ್ ಕೇಸನ್ನು ಕೂಡ ಹಾಕಲಾಗಿದೆ.

ಅಧ್ಯಕ್ಷರು: ಉಳಿದವರು ಯಾರಿದ್ದಾರೋ, ಅವರ ಮೇಲೂ ಕ್ರಮ ಜರುಗಿಸಿದರಾಯಿತು. ಸಚಿವರಿಗೆ ಆ ಕುರಿತ ಮಾಹಿತಿ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ: ಇನ್ನು ಯಾವುದಾದರೂ ಇದ್ದರೆ ಯಾವ ರೀತಿ ತನಿಖೆ ಮಾಡಬೇಕೆಂಬ ಬಗ್ಗೆ ತಾವು ವಿವರವಾಗಿ ಬರೆದು ಕೊಡಿ. ಇಂತಿಂಥ ಊರುಗಳಲ್ಲಿ ಅವ್ಯವಹಾರವಾಗಿದೆ ಎಂದು ನಿಮ್ಮ ಗಮನಕ್ಕೆ ಬಂದಿದ್ದು ಬರೆದು ಕಳುಹಿಸಿದರೆ ಅದರ ಮೇಲೆ ಯಾವ ರೀತಿ ಎನ್‌ಕ್ವೈರಿ ಮಾಡಿಸಬೇಕೂ ಮಾಡಿಸುತ್ತೇವೆ. ಅದರಲ್ಲಿ ಮುಚ್ಚುಮರೆ ಏನಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ಅಧಿಕಾರಿಗಳು ಸರ್ಕಾರದ ಅಧೀನದಲ್ಲಿದ್ದಾರೆಯೇ ವಿನಹ ನನ್ನ ಅಧೀನದಲ್ಲಿಲ್ಲ. ಇದರ ಬಗ್ಗೆ ನಾನು ಒಂದು ವರ್ಷದಿಂದ ಹೇಳುತ್ತಿದ್ದೇನೆ. ಪ್ರತಿ ಗ್ರಾಮ ಪಂಚಾಯಿತಿಗೆ ಹೋಗಿ ನೋಡಿ, ಎಷ್ಟು ಮನೆಗಳು ಅಪೂರ್ಣಗೊಂಡಿವೆಯೆಂದು ಗೊತ್ತಾಗುತ್ತದೆ.

ಅಧ್ಯಕ್ಷರು: ಈಗ ಉದ್ದೇಶ ಬಹಳ ಮುಖ್ಯ. ಹೀಗೆ ದುರುಪಯೋಗವಾಗಬಾರದೆಂಬುದೇ ನಿಮ್ಮ ಅಭಿಪ್ರಾಯ. ಯಾರು ದುರುಪಯೋಗ ಮಾಡಿದ್ದಾರೆ, ಅವರಿಗೆ ಆ ಬಗೆಗಿನ ಮಾಹಿತಿ ಏನು ಲಭ್ಯವಾಗಿದೆ, ಅದರ ಆಧಾರದ ಮೇಲೆ ಈಗಾಗಲೇ ಕ್ರಮ ಜರುಗಿಸಿದ್ದಾರೆ. ಉಳಿದ ಮಾಹಿತಿಯನ್ನೂ ದೊರಕಿಸಿಕೊಟ್ಟರೆ ಕ್ರಮ ಜರುಗಿಸಲು ನಾನು ತಯಾರಾಗಿದ್ದೇನೆಂದು, ಇದರಲ್ಲಿ ಯಾರ ಪರವಾಗಿಯೂ ವಹಿಸಿಕೊಳ್ಳುವ ಆಸಕ್ತಿ ನನಗಿಲ್ಲವೆಂತಲೂ ಹೇಳಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ, ಇದನ್ನು ಹೆಚ್ಚು ಲಂಬಿಸಿಕೊಂಡು ಹೋಗುವುದಕ್ಕಿಂತಲೂ ಈ ಕುರಿತ ಹೆಚ್ಚಿನ ಮಾಹಿತಿ ತಮ್ಮ ಬಳಿ ಇದ್ದರೆ ದಯಮಾಡಿ ನನಗೆ ಕೊಡಿ, ನಾನು ಅವರಿಗೆ ಕಳುಹಿಸಿಕೊಟ್ಟು ಸಂಬಂಧಿಸಿದವರ ಮೇಲೂ ವಿಚಾರಣೆ ಮಾಡಿ ಎಲ್ಲೆಲ್ಲಿ ಅವ್ಯವಹಾರವಾಗಿದೆಯೆಂದು ಸಾಬೀತಾಗುತ್ತದೋ ಅಲ್ಲಿ ಕ್ರಮ ಜರುಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಹಣ ಡ್ರಾ ಮಾಡಿಕೊಂಡಿರುವ ಅಧಿಕಾರಿಗಳು ದುರುಪಯೋಗ ಮಾಡಿಕೊಂಡಿದ್ದಾರೆ. ಫಲಾನುಭವಿಗಳ ಮನೆಗಳು ಅಪೂರ್ಣಗೊಂಡಿವೆ, ಇದು ಇವರ ತಪ್ಪಲ್ಲ. ಅಪೂರ್ಣಗೊಂಡಿರುವ ಮನೆಗಳನ್ನು ಪೂರ್ಣಗೊಳಿಸಬೇಕಲ್ಲ.

ಅಧ್ಯಕ್ಷರು: ಇದು ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ, ಶಾಸಕರಾದವರೆಲ್ಲರಿಗೂ ಗೊತ್ತಿದೆ. ಇದು ಯೋಜನೆಯಡಿ ಫಲಾನುಭವಿಗಳಿಗೆ ಕೊಡುವ ಹಣವಾಗಿದ್ದು, ಫಲಾನುಭವಿಗಳು ಸ್ವತಂತ್ರವಾಗಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಚೈತನ್ಯವಿರುವುದಿಲ್ಲ, ಮಧ್ಯದಲ್ಲಿ ಯಾರಾದರೊಬ್ಬರು ಇರುತ್ತಾರೆ, ಎಲ್ಲಾ ಹಣವನ್ನು ಡ್ರಾ ಮಾಡುವುದು

ಅಧಿಕಾರಿಗಳಾಗಿದ್ದು, ಅವರು ಒಂದು ವೇಳೆ ಡ್ರಾ ಮಾಡಿದ ಹಣವನ್ನು ತಿಂದಿದ್ದರೆ ಮತ್ತು ಅಲ್ಲಿ ಕೆಲಸ ಆಗಿಲ್ಲದೆ ಹೋಗಿದ್ದರೆ ಅವರ ಸಂಬಳದಲ್ಲಿ ಹಣವನ್ನು ಹಿಡಿದುಕೊಳ್ಳಬೇಕಾಗುತ್ತದೆ ಅಥವಾ ಅವರಿಂದ ರೆಕವರಿ ಮಾಡಿಕೊಳ್ಳಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲೂ ಒಂದು ಕಡೆ ಹೀಗೆಯೇ ಆಗಿತ್ತು. ಅನಂತರ, ಆತನ ಬಳಿ ಟ್ರ್ಯಾಕ್ಟರ್ ಎಲ್ಲಾ ಇದೆಯೆಂದು ತಿಳಿದು ಪೋಲೀಸರನ್ನು ಕಳುಹಿಸಿ ಆತನ ಆಸ್ತಿಯನ್ನು ಜಪ್ತಿ ಮಾಡುವುದಾಗಿ ಪೋಲೀಸ್ ಠಾಣೆಯಲ್ಲಿಟ್ಟು ಹೆದರಿಸಿದ ನಂತರ ಏಪ್ಪತ್ತು ಸಾವಿರ ರೂಪಾಯಿಗಳನ್ನು ವಾಪಸ್ಸು ತಂದು ಕೊಟ್ಟ. ಅದನ್ನು ಪುನಃ ನಾವು ಮನೆ ಕಟ್ಟಿದವರಿಗೆ ಹಂಚಿದೆವು. ನೀವು ಒಡಂಬಡಿಕೆಯಿಂದ ಅವರ ಹತ್ತಿರ ಕುಳಿತುಕೊಂಡು ಚರ್ಚಿಸಿ. ಏನಾದರೂ ಸಮಸ್ಯೆಯಾದರೆ ನಾನು ಆ ಕೆಲಸ ಮಾಡಿಕೊಡುತ್ತೇನೆ, ಆ ಜನರಿಗೆ ತೊಂದರೆಯಾಗದಂತೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ: ಅಪೂರ್ಣಗೊಂಡಿರುವ ಆ ಮನೆಗಳನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರ ಏನು ವ್ಯವಸ್ಥೆ ಮಾಡುತ್ತದೆ?

ಅಧ್ಯಕ್ಷರು: ಆ ವ್ಯವಸ್ಥೆಯನ್ನು ನಾವು ಮಾಡೋಣ. ನೀವು, ನಾವು ಮತ್ತು ಅವರು ಕುಳಿತುಕೊಂಡು ಮಾತನಾಡಿ ಮಾಡೋಣ.

ಶ್ರೀ ಎ.ಟಿ.ರಾಮಸ್ವಾಮಿ: ಆ ಮನೆಗಳನ್ನು ಪೂರ್ಣಗೊಳಿಸಬೇಕಲ್ಲ.

ಅಧ್ಯಕ್ಷರು: ನಾನು ಅದನ್ನೇ ಹೇಳುತ್ತಿದ್ದೇನೆ. ವ್ಯವಸ್ಥೆ ಮಾಡಿಸೋಣ. ಆ ಅಧಿಕಾರಿಗಳು ಯಾರಿದ್ದಾರೆ, ಯಾರು ಹಣವನ್ನು ಡ್ರಾ ಮಾಡಿ ತಿಂದಿದ್ದಾರೆ ಅದನ್ನು ಕಂಡುಹಿಡಿಯಬೇಕಾಗುತ್ತದೆ.

ಶ್ರೀ ಎ.ಟಿ.ರಾಮಸ್ವಾಮಿ: ಅಪೂರ್ಣಗೊಂಡಿರುವ ಮನೆಗಳೆಲ್ಲವೂ ಬಿದ್ದುಹೋಗುತ್ತಿವೆ.

ಅಧ್ಯಕ್ಷರು: ಪರಿಹಾರಕ್ಕೆ ನಾನು ನಿಮಗೆ ಮಾರ್ಗ ಸೂಚಿಸುತ್ತಿದ್ದೇವೆ. ನೀವು ಮತ್ತು ವಸತಿ ಸಚಿವರು ಇಬ್ಬರೂ ಬನ್ನಿ. ಎಲ್ಲಿ ದುಡ್ಡು ಡ್ರಾ ಮಾಡಿಕೊಂಡು ಕೆಲಸ ಆಗಿಲ್ಲವೋ ಮತ್ತು ಫಲಾನುಭವಿಗಳಿಗೆ ಇದರಿಂದ ಏನು ತೊಂದರೆಯಾಗಿದೆ ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನೆಲ್ಲಾ ಬಲಿ ಹಾಕುವುದಕ್ಕೆ ಹೇಳುತ್ತೇನೆ ಮತ್ತು ಅವರಿದ ದುಡ್ಡು ವಸೂಲು ಮಾಡೋಣ ಹಾಗೂ ಜನರಿಗೆ ತಮ್ಮ ಮನೆಗಳನ್ನು ಪೂರ್ತಿಗೊಳಿಸುವಂತೆ ಹೇಳಿ ಮುಂದಿನ ಚುನಾವಣೆಯಲ್ಲಿ ನೀವೇ ಗೆಲ್ಲುವಂತೆ ವ್ಯವಸ್ಥೆ ಮಾಡೋಣವೆಂದು ಹೇಳಿದರೆ ನೀವು ಕೇಳುವುದಿಲ್ಲವೇ?

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ನನ್ನ ಸಮಸ್ಯೆಯೇನೆಂದರೆ, ನಾನು ಶಾಸಕನಾಗಿ ಬಂದ ದಿವಸದಿಂದಲೂ ನನ್ನ ಕ್ಷೇತ್ರದಲ್ಲಿರುವ 17 ಅಂಬೇಡ್ಕರ್ ಮನೆಗಳಿಗೆ ಜಂತಿ ಹಾಕುವ ವಿಚಾರವನ್ನು ಹೇಳುತ್ತಲೇ ಬಂದಿದ್ದೇನೆ, ಇನ್ನೂ ಮನೆಗಳು

ಪೂರ್ಣಗೊಂಡಿಲ್ಲ, ಕೆಲವು ಕಡೆ ಗೋಡೆಯನ್ನು ನಿರ್ಮಿಸಿದ್ದರೆ ಇನ್ನೂ ಕೆಲವಕ್ಕೆ ಫೌಂಡೇಶನ್ ಮಾತ್ರ ಹಾಕಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗೆ ನೋಟೀಸ್ ಇಶ್ಯೂ ಮಾಡಿಸಿ ಒಬ್ಬರನ್ನು ಸಸ್ಪೆಂಡ್ ಮಾಡಿದ್ದರೂ ಪುನಃ ಅವರನ್ನು ರಿವೋಕ್ ಮಾಡಿ ಉದ್ಯೋಗ ಕೊಟ್ಟರು. ನನ್ನ ಪ್ರಶ್ನೆಯೇನೆಂದರೆ, ಶಂಖಿದತ್ತನಿಗೆ ಜ್ವರ ಬಂದರೆ ಸೋಮದತ್ತನಿಗೆ ಕಷಾಯ ಕುಡಿಸಬೇಡಿ. ಫಲಾನುಭವಿಗಳು ಯಾರಿದ್ದಾರೋ ಅವರ ಗತಿ ಏನು? ಹದಿನೇಳು ಜನ ಫಲಾನುಭವಿಗಳು ಮನೆ ಇಲ್ಲದೆ ನಿರ್ಗತಿಕರಾಗಿದ್ದು ನನ್ನ ಹತ್ತಿರ ದಿನಾಲೂ ಬರುತ್ತಿದ್ದಾರೆ. ನಾನು ಅವರಿಗೆ ಎಲ್ಲಿ ಮನೆ ಕಟ್ಟಕೊಡಲಿ?

ಅಧ್ಯಕ್ಷರು: ನೀವು ಯಕ್ಷಗಾನದ ಶೈಲಿಯಲ್ಲಿ ಅವರಿಗೆ ಹೇಳಿದರೆ ಹೇಗೆ? ಅವರು ಹಾಸನದವರಾಗಿದ್ದು ಅವರ ಭಾಷೆಯೇ ಬೇರೆ.

ಶ್ರೀ ಕುಂಬಳೆ ಸುಂದರ್‌ರಾವ್: ಈಗ ಅವರಿಗೆ ಏನು ಗತಿ? ಉತ್ತರ ಹೇಳಿ, ಸಂಬಂಧಪಟ್ಟವರಿಂದ ದುಡ್ಡು ವಸೂಲು ಮಾಡಿ ಕ್ರಮ ತೆಗೆದುಕೊಳ್ಳಿ, ಮತ್ತು ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಸಿಕೊಡಿ.

ಶ್ರೀ ಹೆಚ್.ಎಸ್.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯಲ್ಲಿ 1992-93 ಮತ್ತು 1993-94ನೇ ಸಾಲಿನಲ್ಲಿ ನಾವ್ಯಾರೂ ಶಾಸಕರಾಗಿರಲಿಲ್ಲ. ಆ ಸಂದರ್ಭದಲ್ಲಿ ಆಶ್ರಯ ಯೋಜನೆ ಯಡಿ 250 ಮನೆಗಳನ್ನು ಕೊಟ್ಟರು. ಅದರಲ್ಲಿ 82 ಮನೆಗಳನ್ನು ಕಟ್ಟದೆ ಹಣವನ್ನು ಫಲಾನುಭವಿಗಳಿಗೆ ಕೊಡದೆ ಹೌಸಿಂಗ್ ಬೋರ್ಡ್ ಮುಖಾಂತರ ನೇರವಾಗಿ ಗುತ್ತಿಗೆದಾರರಿಗೆ ಕೊಟ್ಟರು. ಗುತ್ತಿಗೆದಾರರು ಹಣ ತೆಗೆದುಕೊಂಡು ಮನೆ ಸೇರಿಕೊಂಡರು. ಅಲ್ಲಿ ಫೌಂಡೇಶನ್ ಮಾತ್ರ ಹಾಕಿದ್ದು, ಈಗ ಯಾರ ಮೇಲೋ ಕ್ರಮ ತೆಗೆದುಕೊಂಡಿದ್ದು ಎನ್‌ಕ್ವೈರಿ ನಡೆಯುತ್ತಿದೆ. ಯಾವ ರೀತಿ ಕ್ರಮ ಯಾರ ಮೇಲೆ ತೆಗೆದುಕೊಳ್ಳುವುದು? ಅಧಿಕಾರಿಗಳಿಗೆ ಹಣ ಕೊಡದೆ ಸರ್ಕಾರದಿಂದ ನೇರವಾಗಿ ಗುತ್ತಿಗೆದಾರರಿಗೆ ಕೊಟ್ಟರು. ಗುತ್ತಿಗೆದಾರರು ಕೂಡ ಹಣ ತೆಗೆದುಕೊಂಡು ಶಿವಮೊಗ್ಗದಲ್ಲಿ ಎಲ್ಲಿಯೋ ಒಂದು ಕಡೆ ಉಳಿದುಕೊಂಡಿದ್ದಾರೆಂದು ಕಾಣಿಸುತ್ತದೆ. ಈಗ ಯಾವ ರೀತಿ ಹಣವನ್ನು ಫಲಾನುಭವಿಗಳಿಗೆ ಕೊಡುವುದು? ಎನ್‌ಕ್ವೈರಿ ಏನಾದರೂ ನಡೆಯಲಿ, ಈಗ ಫೌಂಡೇಶನ್ ಆಗಿ ಅರ್ಧಂಬರ್ಧವಾಗಿರುವ ಮನೆಗಳನ್ನು ಪೂರ್ಣಗೊಳಿಸಲು ಹೊಸದಾಗಿ ಕೊಡಲಿ. ಅಂದರೆ ನಾವೇನೂ ಪಾಪ ಮಾಡಿಲ್ಲ ಅಥವಾ ಸಚಿವರೇನೂ ಪಾಪಮಾಡಿಲ್ಲ ಹಿಂದೆ ಅಧಿಕಾರದಲ್ಲಿದ್ದಂಥ ಕಾಲದಲ್ಲಿ ನಡೆದಂಥ ಘಟನೆ ಇದು.

ಶ್ರೀ ಕುಂಬಳೆ ಸುಂದರ್‌ರಾವ್: ಯಾರ ತಪ್ಪಿಗೆ ಯಾರಿಗೆ ಶಿಕ್ಷೆ? ನನಗೆ ಸಮಾಧಾನವಾಗಲಿಲ್ಲ.

ಶ್ರೀ ಜೆ.ಹೆಚ್.ಪಟೇಲ್: ಸನ್ಮಾನ್ಯ ಸದಸ್ಯರ ಕಳಕಳಿಯೇನೆಂದರೆ, ದುಡ್ಡು ಏನೇ

ಆಗಿರಲಿ, ಯಾರೇ ತಿಂದಿರಲಿ, ಮನೆಗಳು ಅಪೂರ್ಣಗೊಂಡಂಥ ಫಲಾನುಭವಿಗಳಿಗೆ ಮನೆ ಕಟ್ಟಿಸಿಕೊಡದಿದ್ದರೆ ತೊಂದರೆಗೀಡಾಗುತ್ತಾರಾದ್ದರಿಂದ ಪೂರ್ಣಗೊಳಿಸಿ ಕೊಡಬೇಕೆಂದು ಕೇಳುತ್ತಿದ್ದಾರೆ. ಇದರ ಬಗ್ಗೆ ನೋಡುತ್ತೇನೆಂದು ಆಗಲೇ ಸಚಿವರು ಹೇಳಿದ್ದಾರೆ. ಈಗ ನಾನು ಹೇಳುವುದೇನೆಂದರೆ, 'ಫಲಾನುಭವಿಗಳು' ಎಂದು ಹೇಳುತ್ತೇವಲ್ಲ, ನಿಜವಾದ ಫಲಾನುಭವಿಗಳು ಇಲ್ಲವೇ ಇಲ್ಲ. ಕೆಲವರು ಎಲೆಕ್ಷ್ ಆಗಲಿಲ್ಲ, ಕೆಲವರು ರಿಟೈರ್ ಆಗಿ ಹೋದರು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು ಜವಾಬ್ದಾರರಾಗಿದ್ದಾರೋ ಅವರನ್ನು ನಾವು ಶಿಕ್ಷಿಸುತ್ತೇವೆ.

ವಿಷಯ: ಸುಳ್ಯ ಕ್ಷೇತ್ರದಲ್ಲಿ ಸ್ಮಶಾನ ಭೂಮಿ ದೊರೆಯದಿರುವುದು.

509 (3264)

ಶ್ರೀ ಎಸ್.ಅಂಗಾರ (ಸುಳ್ಯ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುಳ್ಯಾ ವಿಧಾನಸಭಾ ಕ್ಷೇತ್ರದಲ್ಲಿ ಕೆಲವುಕಡೆ ಶವವನ್ನು ಸುಡಲು ರುದ್ರ ಭೂಮಿ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಮಂತ್ರಿಗಳು):

1) ಇಲ್ಲ.

2) ಉದ್ಭವಿಸುವುದಿಲ್ಲ.

ಶ್ರೀ ಎಸ್.ಅಂಗಾರ:- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕೆಲವು ಕಡೆ ಶವನ್ನು ಸುಡಲು ರುದ್ರಭೂಮಿ ಇಲ್ಲ, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದಕ್ಕೆ ಇಲ್ಲವೆಂದು ಹೇಳಿದ್ದಾರೆ. ಸುಳ್ಯ ಕ್ಷೇತ್ರದಲ್ಲಿ ಕೇವಲ 20 ಕಡೆ ಮಾತ್ರ ಶವ ಹೂಳಲು ಸ್ಥಳವಿದೆ. ಬಾಕಿ ಸ್ಥಳಗಳಲ್ಲಿ ರುದ್ರಭೂಮಿ ಇಲ್ಲದೆ ತೊಂದರೆಯಾಗಿದೆ. ಕೊನೆಯ ಪಕ್ಷ ಜನತಾ ಕಾಲೋನಿಗಳು ಪರಿಜನರು, ಗಿರಿಜನರು ವಿಶೇಷವಾಗಿ ಎಲ್ಲಿ ವಾಸಿಸುತ್ತಾರೆ ಅಲ್ಲಿ ಜನತಾ ಮನೆಗಳಿವೆ ಅಲ್ಲಿ ಶವವನ್ನು ಹೂಳಲು ಸ್ಥಳವಿಲ್ಲದೆ ಶವವನ್ನು ಎರಡು ಮೂರು ದಿವಸ ಹಾಗೆ ಇಟ್ಟುಕೊಂಡಿರುವುದನ್ನು ಕಣ್ಣಾರೆ ನೋಡಿದ್ದೇನೆ. ಆದ್ದರಿಂದ ಸುಮಾರು 250 ಮನೆಗಳಿರುವ ಪ್ರತಿಯೊಂದು ಗ್ರಾಮಗಳಿಗೆ ರುದ್ರಭೂಮಿಯನ್ನು ಒದಗಿಸಿಕೊಡಬೇಕು ಎಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಈ ರುದ್ರಭೂಮಿಯನ್ನು ಒದಗಿಸಿಕೊಡಬೇಕು ಎಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಈ